# ಶ್ರೀನಿವಾಸನ ಸೋಪಾನಗಳು

## ಹತ್ತುವ ಬಗೆ

### ಧ್ರುವತಾಳ

ಮಿರುಗುವ ಉರಗಗಿರಿಯ ಶಿಖರವನು ಕಂಡೆನಾ । ಪರಮ ಧನ್ಯನಾದೆ ಗುರುಗಳ ಕರುಣದಿಂದ ।
ಧರಣಿಯೊಳಗಿದಕೆಲ್ಲಿ ಸರಿಗಾಣೆ ನಾನಾ ಬಗೆ । ಅರಿಸಿದರು ಸರ್ವಶ್ರುತಿಗಳಲ್ಲಿ ತಿಳಿದೂ ।
ಅರರೆ ಮತ್ತಾವನೋ ಈ ಯಾತ್ರಿಯ ಪುಣ್ಯ । ಬರೆದು ಕಡೆಗಂಡು ಗುಣಿಸೆಣಿಪನಾರು ।
ತಿರುವೆಂಗಳಪ್ಪ ನಿಪ್ಪಕ್ಷೇತ್ರದ ಮಹಿಮೆಯನು । ಇರುಳು ಹಗಲು ವರ್ಣಿಸಲಿ ಸವೆಯದು ।
ಸುರರು ಮೊದಲಾದವರು ರೂಪಾಂತರವ ತಾಳಿ । ಹರುಷ ಬಡುವರು ನೋಡಿ ಜ್ಞಾನಿಗಳು ।
ತರುಲತೆ ಖಗಮೃಗ ಜಲಚರಾದಿಗಳಾಗಿ । ಚರಿಸುತಿಪ್ಪರು ಸಾಧನವ ಮಾಡುತಾ ।
ದುರುಳ ಜನಕೆ ಇಲ್ಲನಂತಜನುಮಕ್ಕೆ । ಕರಣ ಶುದ್ಧ ಭಕ್ತಿ ಪುಟ್ಟದಯ್ಯಾ ।
ಮರುಳೆ ದೊರೆತರೆ ಲೋಹದ ಮೇಲೆ ಹೇಮದ । ಯರಕ ಹೊಯಿದಂತೆ ನಿಂದಿರಲರಿಯದು ।
ವರ ತತ್ವ ತಾರತಮ್ಯವ ತಿಳಿದು ಬಂದೆ ವಾ । ಸರದೊಳಗೆ ಒಮ್ಮೆ ಈ ಗಿರಿಯನೆನೆಸೆ ।
ದುರಿತರಾಶಿಗಳೆಲ್ಲ ಪರಿಹಾರವಾಗುವುದು । ಪರಗತಿಗೆ ಬಲುಸುಲಭ ಸಂತತದಲ್ಲಿ ।
ಶರಣಿಗೊಜ್ರಾ ಪಂಜರ ವಿಜಯವಿಠ್ಠಲ । ಮೆರೆವನು ಬಹುಬಗೆಯಿಂದ ವರಗಳನೆ ಕೊಡುತ ॥ 1 ॥

### ಮಟ್ಟತಾಳ

ಕೋಡಗಲ್ಲಿನ ನೋಡೆ ಬಲದೇವನೆಂದು । ಮಾಡಿದ ಬ್ರಹ್ಮಹತ್ಯಾ ಓಡಿಪೋಯಿತು ನಿಲ್ಲದೆ ।
ಆಡಲೇನು ಇದಕೆ ಅನುಮಾನವೆ ಸಲ್ಲಾ । ನಾಡೊಳಗೆ ಮಹಬಕುತಿ ದೊರೆಯದಲೆ ।
ಕೂಡದು ಈ ಯಾತ್ರಿ ಆವನಾದರೇನು । ಬಾಡಿ ಒಣಗಿ ಪೋದ ಮರಕೆ ನದಿಯ ಉದಕ ।
ಗೂಡೆಯಿಂದಲಿ ಎತ್ತಿ ಕಾಲವ ಕಳೆದಂತೆ । ಮೂಢಜ್ಞಾನಿಗಳಾಗಿ ಪರಿಪರಿಯಿಂದ ।
ಕೊಂಡಾಡಿ ಕುಣಿಯಲೇನು ಗತಿಸಾಧನವಲ್ಲ । ಕೇಡಿಲ್ಲದ ದೈವ ವಿಜಯವಿಠ್ಠಲರೇಯ ।
ಪಾಡಿದ ಮನುಜಂಗೆ ಪಾವನ ಮತಿಯೀವ ॥ 2 ॥

### ರೂಪಕತಾಳ

ಹರಿದ್ರವರೂಪದಲಿ ಕಪಿಲತೀರ್ಥದಲಿ । ನಿರುತದಲ್ಲಿ ಇಪ್ಪ ತನ್ನಾಮಕನಾಗಿ ।
ಸ್ಮರಿಸಿ ನೈಮಿತ್ಯಕ ತನ್ನ ವಂಶಗಳ ಉದ್ಧರಿಸಿ । ಭೂಸುರರ ಸುಖಬಡಿಸಿ ದಾನಗಳಿಂದ ।
ಗುರುಹಿರಿಯರ ಸಹಿತ ಗಿರಿಯ ಪ್ರಾದೇಶಕ್ಕೆ । ತೆರಳಿ ಬಂದೂ ನಿಂದು ಸೌಪಾನದೆಡೆಯಲ್ಲಿ ।
ವರಸಾಲಿಗ್ರಾಮವನು ಮುಂಭಾಗದಲಿ ಇಟ್ಟು । ಕರವ ಜೋಡಿಸಿ ಸಾಷ್ಟಾಂಗ ನಮಸ್ಕಾರವನು ।
ಭರದಿಂದ ಮಾಡಿ ಕುಳಿತು ಉತ್ತಮವಾದ । ಹರಿಕಥೆಯನ್ನು ಕೇಳಿ ತತ್ವಗಳನುಸರಿಸಿ ।
ಪರಮ ಭಾಗವತರಿಂದ ಗಾಯನವ ಲಾಲಿಸಿ । ಕರದು ಸಜ್ಜನರ ಸಂಗಡಲೆ ಕುಣಿದು ।
ಬರುತಾ ನೂರು ನೂರು ಪಾವಟಿಗಿಯಲ್ಲಿದೇ । ತೆರದಿಂದ ಮಾಡುತ ತಡವಾಗದಂತೇವೆ ।
ನರಸಿಂಹ ಮೂರುತಿಯ ದರುಶನವು ಮಾಡಿ ಸು । ದರುಶನತೀರ್ಥದಲ್ಲಿ ಮಿಂದು ತುತಿಸಿ ನಿಂದು ।
ಕರತಳ ಶಬ್ದದಲಿ ಹೋಯೆಂದು ನಲಿದಾಡೆ । ಸಿರಿವಂತಾರರಸಾ ತಿರ್ಮಲ ವಿಜಯವಿಠಲ ।
ಪರದೈವವೆಂದು ಪೊಗಳಿ ಹಿಗ್ಗಲಿಬೇಕು ॥ 3 ॥

**ಝಂಪೆತಾಳ**

ಏರುತೇರುತ ಬದು ಮಾರುತನ್ನ ನೋಡಿ ಮಹ । ದ್ವಾರದ ಬಳಿಯ ಸಾರ್ದು ಅತಿ ಮೋದದಿ ।
ಸಾರಿ ಶ್ರೀಹರಿಯ ಗುಣಾವಳಿಯ ಉಚ್ಚರಿಸಿ । ಈರಾರು ಪ್ರದಕ್ಷಿಣೆಯನ್ನು ಮಾಡಿ ।
ಭೋರನೆ ಮತಿಕೊಡುವ ಸ್ವಾಮಿ ಪುಷ್ಕರಣಿಯಾ । ತೀರದಲಿ ನಿಂದು ಸ್ನಾನವನು ಮಾಡಿ ।
ಚಾರು ಮನಸಿಂದ ಸವ್ಯದಲಿ ಬಂದು ವಿ । ಸ್ತಾರ ಭಕುತಿಯಲಿ ದ್ವಾರವನೆ ಪೊಕ್ಕು ।
ಭೂರಮಣನ ಪಾದ ನಿರೀಕ್ಷಿಸಿ ಆಮೇಲೆ । ಆರಾಧಿಸು ಗುಪ್ತದಲಿ ಬಿಡದೆ ।
ಮೀರಿದ ಮಹಾಮೂರ್ತಿ ವಿಜಯವಿಠಲ ವೆಂಕಟ । ಸೂರೆಗಾಣೊ ಕಂಡ ಜನರಿಗೆ ಪ್ರತಿದಿನ ॥ 4 ॥

**ತ್ರಿವಿಡಿತಾಳ**

ಮೂರೊಂದು ಬೀದಿಯಾ ತಿರುಗಿ ವೆಂಕಟನ ಮಹಾ । ದ್ವಾರವ ಪೊಕ್ಕು ಗರುಡಗಂಬದ ಬಳಿಯಾ ।
ಪಾರಮಾರ್ಥಕನಾಗಿ ಕುಳಿತು ಹರಿಯಾ ವ್ಯಾ । ಪಾರವ ಚಿಂತಿಸು ಅಡಿಗಡಿಗೆ ।
ತಾರತಮ್ಯದಿಂದ ಸುರರಾದಿ ಗುಣ ತಿಳಿದು । ಚಾರು ಪೀಠಾವರ್ಣ ಪೂಜೆ ವಿಧವ ।
ಪೂರೈಸಿ ಮಡಿ ಸಮ್ಮೊಗದಿ ನಿಂದು ಬಂ । ಗಾರ ಬಾಗಿಲನೆ ಪ್ರವೇಶ ಮಾಡಿ ।
ಹಾರೈಸು ಅಲ್ಲಿಂದ ಹೊನ್ನ ಹೊಸ್ತಲ ಬಳಿಯ । ಸೇರಿ ಸಾಕಲ್ಯದಲಿ ಹರಿಮೂರ್ತಿಯಾ ।
ಕಾರಣಿಕವ ಗ್ರಹಿಸಿ ಗೋಳಕವ ಚಿಂತಿಸಿ । ಗಾರುಮಾಡದೆ ನಿನ್ನ ಒಳಗೆ ಇಪ್ಪ ।
ಮೂರುತಿಯಾ ಇಟ್ಟು ಏಕಿಭೂತವೆಂದು । ನಾರಾಯಣನ ವ್ಯಾಪ್ತತ್ವ ತಿಳಿದು ।
ಶಾರದಪತಿ ಪ್ರೀಯ ವಿಜಯವಿಠಲ ತಿಮ್ಮನ । ಪಾದ ಗುಣಗಳು ತುತಿಸಿ ಕೊಂಡಾಡಿ ॥ 5 ॥

**ಅಟ್ಟತಾಳ**

ರಾಜರಾಜೇಶ್ವರನೆ ರಣರಂಗಧೈರ್ಯನೆ । ತೇಜೋಮಯಕಾಯ ಬೊಮ್ಮಾದಿಗಳಿಂದ ।
ಪೂಜಿತ ಪುಣ್ಯಶ್ಲೋಕ ಮುಕ್ತಿ । ಬೀಜನೇ ಭವದೂರ ಬಲು ಲೀಲಾವಿನೋದ ।
ಮೂಜಗತ್ಪತಿ ಮೂಲಪುರುಷ ಪರಮೇಶ । ಸೋಜಿಗ ತೋರುವ ಸಿದ್ಧಾಂತ ಮಹಿಮಾ ಸ ।
ರೋಜನಯನ ಬಲಜ್ಞಾನಾನಂದ ಪೂರ್ಣ । ಹೇ ಜಲಧರವರ್ಣ ಹೇಮಾಂಬರಧರ ।
ರಾಜರಾಜನುತ ರಾಗವಿದೂರಾಽಯೋ । ನಿಜ ನಿಶ್ಚಿಂತ ನಿರ್ಮಳಾ ನಿತ್ಯತೃಪ್ತ ಪ್ರ ।
ಯೋಜನವಿಲ್ಲದೆ ಜಗವ ಪುಟ್ಟಿಸುವ ವಿ । ರಾಜಿತ ಸತ್ಕೀರ್ತಿ ದೈತ್ಯವಿದಾರಣ ।
ಭೋಜಾ ಕುಲೋತ್ತುಮ ವಿಜಯವಿಠಲ ವೆಂಕಟ । ಮಾಜದೆ ಪೊರೆಯೆಂದು ಧ್ಯಾನಮಾಡುತಲಿರು ॥ 6 ॥

**ಆದಿತಾಳ**

ಸರ್ಪಗಿರಿಯ ಯಾತ್ರಿ ಮುಪ್ಪುರಾರಿ ಗರಿದು । ತಪ್ಪದೆ ಮಾಡಲಾಗಿ ವಪ್ಪುಪ್ಪಗೊಂಬುವ ಹರಿ ।
ಅಪ್ರೀತಿಯಿಲ್ಲದ ತಪ್ಪುಗಳರೆ ವೊಲಿದು । ಕಪ್ಪು ಉಳಿಯದಂತೆ ಅಪಹರಿಸಿ ಇವನಾ ।
ಅಪ್ಪಡಿಯಾಗಿ ಸಾಕಿ ಅಪವರ್ಗವ ಕೊಡುವ । ಒಪ್ಪಿಡಿ ಅವಲಿಗೆ ಭಾಗ್ಯವಿತ್ತನ್ನ ಪಾದಾ ।
ರೆಪ್ಪೆ ಹಾಕದೆ ನೋಡಿ ಮನದಲ್ಲಿ ನಿಲಿಸೋದು । ಸುಪ್ರಕಾಶ ನಮ್ಮ ವಿಜಯವಿಠಲ ವೆಂಕಟ ।
ನಿಪ್ಷಕ್ಷೇತ್ರದ ಮಹಿಮೆ ನಾನಾಬಗಿ ವರ್ಣನೆ ॥ 7 ॥

**ಜತೆ**

ಕಾಮಿತಾರ್ಥಪ್ರದಾಯಕ ತಿರುವೆಂಗಳ । ಸ್ವಾಮಿ ವೆಂಕಟರನ್ನ ವಿಜಯವಿಠಲನೊಲಿವ ॥ 8 ॥

— —

## ಸುಳಾದಿಯ ಸಾರ

**"ವೇಂಕಟಾದ್ರಿ ಸಮಂಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ । ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ"** ಎಂಬ ವಾಕ್ಯದಂತೆ ವೆಂಕಟಾದ್ರಿಗೆ ಸಮವಾದ ಸ್ಥಾನ ಈ ಬ್ರಹ್ಮಾಂಡದಲ್ಲೇ ಇಲ್ಲ. ಜಗನ್ನಾಥನ ದಿವ್ಯಸನ್ನಿಧಿಯಿಂದ ಯುಕ್ತವಾದ ಸಾಲಿಗ್ರಾಮಾತ್ಮಕವಾದ ಶಿಲಾದ್ರಿಯನ್ನು ಮುಕ್ತಾಮುಕ್ತ ದೇವತೆಗಳು ಭಗವಂತನ ದರ್ಶನಾಕಾಂಕ್ಷಿ ಹಾಗೂ ಸೇವಾಕಾಂಕ್ಷಿಗಳಿಗಾಗಿ ಬೇರೆ ಬೇರೆ ರೂಪಗಳನ್ನು ಧಾರಣ ಮಾಡಿ ಪಾಲಿಸುತ್ತಿರುವರು. ವೆಂಕಟನ ದಿವ್ಯಮಂದಿರವೇ ಅಯೋಧ್ಯೆ, ವಿರಜೆಯೇ ಸ್ವಾಮಿಪುಷ್ಕರಿಣಿ. ಇಂತಹ ವೈಕುಂಠವೂ ಸಹ ಏಳು ಲೋಕಗಳ ಮೇಲೆ ಇದೆ. ವೆಂಕಟನ ಮಂದಿರವೂ ಸಹ ೭ ಬೆಟ್ಟಗಳ ಮೇಲೆ ಇವೆ. ಆದ್ದರಿಂದ ಈ ಅನುಸಂಧಾನದಿಂದಲೇ ಎಲ್ಲಾ ಹರಿದಾಸರು ಭಗವಂತ-ನನ್ನು ಒಲಿಸುವ ಪ್ರಯತ್ನ ಮಾಡಿ ಸಫಲರಾಗಿದ್ದು.

ಇಂಥ ಪರಮಪವಿತ್ರವಾದ ಸಾಲಿಗ್ರಾಮಾತ್ಮಕವಾದ ಬೆಟ್ಟವನ್ನು ಹತ್ತುವಾಗ ಮೇಲಿನ ಅನುಸಂಧಾನದ ಜೊತೆಗೆ ಅನುಸರಿಸಬೇಕಾದ ವಿಧಾನ ಹಾಗೂ ಬೆಟ್ಟದ ಮೇಲೆ ಮಾಡಬೇಕಾದ ಕರ್ತವ್ಯವನ್ನು ದರ್ಶನ ಪದ್ಧತಿಯನ್ನು ಹರಿದಾಸರು ವಿಹಂಗಮವಾಗಿ ಚಿತ್ರಿಸಿರುವರು.

ಪ್ರಥಮದಲ್ಲಿ ಕಪಿಲತೀರ್ಥದಲ್ಲಿ ಸ್ನಾನಮಾಡಿ ಹಿರಿಯರಿಂದ ಒಡಗೂಡಿ ಸೋಪಾನಗಳ ಬಳಿ ಸೇರಿ ಶ್ರೀಹರಿಯನ್ನು ಸ್ಮರಿಸುತ್ತಾ ಮೊದಲ ಮೆಟ್ಟಿಲ ಮೇಲೆ ಸಾಲಿಗ್ರಾಮವನ್ನು ಇಟ್ಟು ಪೂಜಿಸಿ, ನಾದಬ್ರಹ್ಮನ ಗುಣಗಳನ್ನು ಸ್ಮರಿಸುತ್ತಾ ಬೆಟ್ಟವನ್ನು ಹತ್ತಬೇಕು. ಪ್ರತಿ ೧೦೦ ಸೋಪಾನಗಳಿಗೆ ಇದೇ ರೀತಿ ಪೂಜೆಯನ್ನು ಸಲ್ಲಿಸಿ ಪ್ರಯಾಣ ಮಾಡಬೇಕು.

ಮುಂದೆ ಮಧ್ಯಮಾರ್ಗದಲ್ಲಿ ಸುದರ್ಶನತೀರ್ಥದಲ್ಲಿ ಮಿಂದು ಅಲ್ಲಿರುವ ನರಸಿಂಹನ ಮೂರ್ತಿಗೆ ನಮಿಸಿ ಬೆಟ್ಟದ ಉತ್ತುಂಗಕ್ಕೆ ತೆರಳಬೇಕು. ಅಲ್ಲಿ 'ಬೇಡಿ ಹನುಮಂತ'ನಿಗೆ ನಮಸ್ಕರಿಸಿ ಶ್ರೀನಿವಾಸನ ಮಹಾದ್ವಾರದ ಬಳಿ ಮೈಮರೆತು ಗೋವಿಂದ ನಾಮಸ್ಮರಣೆಯನ್ನು ಮಾಡಬೇಕು. ಆನಂತರ ಶ್ರೀನಿವಾಸನ ದೇವಾಲಯಕ್ಕೆ ೧೨ ಸಲ ಪ್ರದಕ್ಷಿಣೆ ಮಾಡಿ ಪವಿತ್ರವಾದ ಸ್ವಾಮಿಪುಷ್ಕರಣಿಯಲ್ಲಿ ಸಂಕಲ್ಪ ಪೂರ್ವಕವಾಗಿ ಸ್ನಾನವನ್ನು ಮಾಡಿ ತನ್ನ ಭಕ್ತರ ಭಾರವನ್ನು ಹೊತ್ತಿರುವ

ಧರಣೀಧರನಿಗೆ ದೀರ್ಘದಂಡ ಪ್ರಣಾಮಗಳನ್ನು ಅರ್ಪಿಸಿ ಶ್ರೀನಿವಾಸನ ಮಂದಿರವನ್ನು ಸೇರಬೇಕು. ಅನಂತರ ಗರುಡಗಂಬದ ಹತ್ತಿರ ಧ್ಯಾನಾಸಕ್ತರಾಗಿ ಪರಮಾತ್ಮನ ವ್ಯಾಪಾರ ವ್ಯಾಪ್ತಿಯನ್ನು ಚಿಂತಿಸಿ ತಾರತಮ್ಯಾನುಸಾರ ಎಲ್ಲಾ ದೇವತೆಗಳಿಗೆ ವಂದಿಸಿ ಗರ್ಭಾಲಯದ ಬಳಿ ಶ್ರೀನಿವಾಸನ ದಿವ್ಯಮಂಗಳ ರೂಪದ ದರ್ಶನ ಪಡೆದು ತನ್ನ ಪಿಂಡಾಂಡದಲ್ಲಿ ಇರತಕ್ಕ ಭಗವದ್ರೂಪದ ಬಿಂಬಾಭಿನ್ನನಾದ ಭಗವಂತನನ್ನು ನೆನೆದು ನರಜನ್ಮವನ್ನು ಸಾರ್ಥಕಗೊಳಿಸಿ-ಕೊಳ್ಳಬೇಕು. ಇದೇ ಭಗವಂತನನ್ನು ನೋಡುವ ಮೋಕ್ಷದ ಹಾದಿ. ಈ ಹಾದಿ-ಯನ್ನು ಪ್ರಾತಃಸ್ಮರಣೀಯರಾದ ಶ್ರೀವಿಜಯದಾಸರು ಸುಳಾದಿಯ ರೂಪದಲ್ಲಿ ಅನುಗ್ರಹಿಸಿ ಕೊಟ್ಟಿದ್ದಾರೆ. ಈ ಸುಳಾದಿಯ ಜೊತೆ ತಿರುಪತಿಯ ಯಾತ್ರೆ-ಯನ್ನು ಮಾಡಿದ ಪ್ರತಿಯೊಬ್ಬ ಭಕ್ತನಿಗೂ ಶೀಹರಿ ಅನುಗ್ರಹಿಸುತ್ತಾನೆ ಎಂಬ ಹಿನ್ನಲೆಯಲ್ಲಿ ಈ ಸುಳಾದಿಯನ್ನು ಪ್ರಕಟಿಸುತ್ತಿದ್ದೇವೆ. ಮೇಲೆ ಹೇಳಿದ ಹರಿದಾಸರು ಹಾಕಿಕೊಟ್ಟ ಮಾರ್ಗದಲ್ಲೇ ನಡೆದು ಧನ್ಯರಾಗೋಣ.